ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ	:	714
ಸದಸ್ಯರ ಹೆಸರು	:	ಶ್ರೀ.ಐವನ್ 'ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	:	12.03.2020
ಉತ್ತರಿಸುವ ಸಚಿವರು	:	ಮುಖ್ಯಮಂತ್ರಿಗಳು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ವಿದ್ಯುಚ್ಛಕ್ತಿ ಉತ್ಪಾದಿಸಲು ಎಷ್ಟು ಮನೆಗಳಿಗೆ ಸೋಲಾರ್ ಮೇಲ್ಛಾವಣಿ ಘಟಕಗಳನ್ನು ಅಳವಡಿಸಲಾಗಿದೆ: (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)</td><td>ರಾಜ್ಯದಲ್ಲಿನ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಒಟ್ಟು 4027 ಸಂಖ್ಯೆಯ ಗ್ರಾಹಕರುಗಳು ಸೋಲಾರ್ ಮೇಲ್ಛಾವಣಿ ಘಟಕಗಳನ್ನು ಅಳವಡಿಸಿಕೊಂಡಿದ್ದು, ಜಿಲ್ಲಾವಾರು ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ.</td></tr>
<tr><td>ಆ</td><td>ಪ್ರಸ್ತುತ ಬೇಡಿಕೆ ಇರುವ ವಿದ್ಯಚ್ಛಕ್ತಿ ಎಷ್ಟು; ಯಾವ ಮೂಲಗಳಿಂದ ಉತ್ಪಾದಿಸಲಾಗಿದೆ; ತಗಲುವ ವೆಚ್ಚ ಎಷ್ಟು;</td><td>ರಾಜ್ಯದಲ್ಲಿ ಪ್ರಸ್ತುತ, ದಿನವಹಿ 255 ರಿಂದ 261 ದಶಲಕ್ಷ ಯೂನಿಟ್ ಗಳ (8,000-13,300 ಮೆಗಾ ವ್ಯಾಟ್) ವಿದ್ಯುತ್ ಬೇಡಿಕೆ ಇರುತ್ತದೆ.
ರಾಜ್ಯಕ್ಕೆ ವಿವಿಧ ಮೂಲಗಳಿಂದ ವಿದ್ಯುತ್ ಲಭ್ಯವಾಗುತ್ತಿದ್ದು, ವಿವರಗಳು ಕೆಳಕಂಡಂತಿವೆ.<table><tr><th>ಕ್ರ.ಸಂ</th><th>ವಿದ್ಯುತ್ ಮೂಲ</th></tr><tr><td>1</td><td>ಜಲ ವಿದ್ಯುತ್</td></tr><tr><td>2</td><td>ಶಾಖೋತ್ಪನ್ನ</td></tr><tr><td>3</td><td>ಕೇಂದ್ರದಿಂದ ರಾಜ್ಯದ ಪಾಲು</td></tr><tr><td>4</td><td>ಬೃಹತ್ ಐ.ಪಿ.ಪಿ</td></tr><tr><td>5</td><td>ಅಸಂಪ್ರದಾಯಕ ಮೂಲಗಳು (ಸೋಲಾರ್, ಪವನ ವಿದ್ಯುತ್, ಸಹ-ಉತ್ಪಾದನೆ, ಕಿರು ಜಲ, ಜೈವಿಕ ಇಂಧನ ಮೂಲದಿಂದ ವಿದ್ಯುತ್ ಉತ್ಪಾದನೆ)</td></tr></table>ವಿದ್ಯುತ್ ಉತ್ಪಾದನೆಗೆ ತಗಲುವ ವೆಚ್ಚದ ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಿದೆ.</td></tr>
<tr><td>ಇ</td><td>ಸೋಲಾರ್ ಮೂಲಕ ಉತ್ಪಾದಿಸುವ ವಿದ್ಯುಚ್ಛಕ್ತಿ ಎಷ್ಟು; ಯೂನಿಟ್ ಒಂದಕ್ಕೆ ತಗಲುವ ವೆಚ್ಚ ಎಷ್ಟು;</td><td>ಪ್ರಸಕ್ತ 2019-20 ನೇ ಸಾಲಿನಲ್ಲಿ, ಜನವರಿ ಅಂತ್ಯದವರೆಗೆ 6776.355 ದಶಲಕ್ಷ ಯೂನಿಟ್ ಗಳಷ್ಟು ವಿದ್ಯುತ್ತನ್ನು ಸೋಲಾರ್ ಘಟಕಗಳ ಮೂಲಕ ಪಡೆಯಲಾಗಿದೆ.
ಪ್ರಸ್ತುತ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ಕೆ.ಇ.ಆರ್.ಸಿ) ಆದೇಶದಂತೆ ಮೆಗಾ ವ್ಯಾಟ್ ಆಧಾರಿತ ಸೌರ ಯೋಜನೆಗಳ ಅನುಷ್ಠಾನಕ್ಕೆ ಮೆಗಾ ವ್ಯಾಟ್ ಒಂದಕ್ಕೆ ರೂ. 3.40 ಕೋಟಿ ಬಂಡವಾಳ ವೆಚ್ಚವಾಗಲಿದ್ದು, ಸದರಿ ಯೋಜನೆಗಳ ಪ್ರತಿ ಯೂನಿಟ್ ಜಕಾತಿ ದರ ರೂ. 3.08/-. ಸದರಿ ಯೋಜನೆಗಳ ಪ್ರತಿ ಯೂನಿಟ್ ಜಕಾತಿ ದರ ರೂ. 3.08/-. ಮೆಗಾ ವ್ಯಾಟ್ ಆಧಾರಿತ ಸೋಲಾರ್ ವಿದ್ಯುತ್ ಅನ್ನು ರಿವರ್ಸ್ ಬಿಡ್ಡಿಂಗ್ ನಲ್ಲಿ ಖರೀದಿಸುತ್ತಿದ್ದು, ದರವು ಬಿಡ್‌ನಿಂದ ಬಿಡ್‌ಗೆ ವ್ಯತ್ಯಾಸವಾಗುತ್ತದೆ.</td></tr>
</table>

<table>
<tr>
<td></td>
<td></td>
<td>ಪ್ರಸ್ತುತ ಕೆ.ಇ.ಆರ್.ಸಿ ರವರ ಆದೇಶದ ಪ್ರಕಾರ ಸೌರ ಮೇಲ್ಛಾವಣಿ ಘಟಕಗಳಿಗೆ ಈ ಕೆಳಕಂಡ ದರಗಳನ್ನು ನಿಗದಿಪಡಿಸಲಾಗಿರುತ್ತದೆ.
<table>
<tr><th>ಸಾಮರ್ಥ್ಯ</th><th>ದರಗಳು ರೂ/ಯೂನಿಟ್ ಗೆ (ಸಬ್ಸಿಡಿ ರಹಿತ)</th><th>ದರಗಳು ರೂ/ಯೂನಿಟ್ ಗೆ (ಸಬ್ಸಿಡಿ ಸಹಿತ)</th></tr>
<tr><td>1 ಕಿ. ವ್ಯಾ. -10 ಕಿ. ವ್ಯಾ. (ಗೃಹ ಬಳಕೆ ಗ್ರಾಹಕರಿಗೆ)</td><td>3.99</td><td>2.97</td></tr>
<tr><td>1 ಕಿ. ವ್ಯಾ.- 2000 ಕಿ.ವ್ಯಾ.</td><td>3.07</td><td>2.32</td></tr>
</table>
</td>
</tr>
<tr>
<td>ಈ</td>
<td>ಸೋಲಾರ್ ವಿದ್ಯುಚ್ಛಕ್ತಿ ಉತ್ಪಾದನೆಗೆ ಪ್ರೋತ್ಸಾಹಿಸಲು ಸರ್ಕಾರ ಕೈಗೊಂಡ ಯೋಜನೆಗಳು ಯಾವುದು;</td>
<td>ಸರ್ಕಾರವು ಸೌರ ವಿದ್ಯುತ್ ಉತ್ಪಾದನೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಸೌರ ನೀತಿ 2014-21 ಅನ್ನು ಜಾರಿಗೊಳಿಸಿದೆ. ಸೌರ ನೀತಿಯಂತೆ ಈ ಕೆಳಕಂಡ ವರ್ಗಗಳಲ್ಲಿ ಯೋಜನೆಗಳನ್ನು ಅನುಷ್ಠಾನಗೊಳಿಸಬಹುದಾಗಿರುತ್ತದೆ:
1. ಸ್ಪರ್ಧಾತ್ಮಕ ಬಿಡ್ ಮುಖೇನ
2. ಭೂ ಮಾಲೀಕ ರೈತರ ವರ್ಗ (ನೀತಿಯ ಅವಧಿಗೆ ಸದರಿ ಯೋಜನೆಯಡಿ ಹಂಚಿಕೆ ಮುಕ್ತಾಯಗೊಂಡಿದೆ)
3. Renewable Energy Certificate Mechanism (RECM) ವರ್ಗ.
4. ಸ್ವತಂತ್ರ ವಿದ್ಯುತ್ ಉತ್ಪಾದಕರ ವರ್ಗ (ಸ್ವಯಂ ಬಳಕೆ/ಸಮೂಹ ಸ್ವಯಂ ಬಳಕೆ ಮತ್ತು ಮೂರನೇ ವ್ಯಕ್ತಿಗೆ ಮಾರಾಟ)
5. ಸೋಲಾರ್ ಪಾರ್ಕ್ ವರ್ಗ
6. ಸೌರ ಮೇಲ್ಛಾವಣಿ ವರ್ಗ
ಇದಲ್ಲದೇ ಸೌರ ವಿದ್ಯುತ್ ಅನ್ನು ಪ್ರೋತ್ಸಾಹಿಸಲು ಈ ಕೆಳಕಂಡ ಯೋಜನೆ/ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ.
<u>ಜಾಲಮುಕ್ತ ಸೌರ ನೀರಾವರಿ ಪಂಪ್‌ಸೆಟ್ ಯೋಜನೆ:</u>
ರಾಜ್ಯ ಸರ್ಕಾರದ ರೂ. 66.8 ಕೋಟಿ ಸಹಾಯಧನದೊಂದಿಗೆ ಜಾಲಮುಕ್ತ ಸೌರ ನೀರಾವರಿ ಪಂಪ್‌ಸೆಟ್ ಯೋಜನೆಯನ್ನು ರಾಜ್ಯದಲ್ಲಿ ನಾಲ್ಕು ಹಂತಗಳಲ್ಲಿ ಒಟ್ಟು 3710 ಸಂಖ್ಯೆಯ ಜಾಲಮುಕ್ತ ಸೌರ ನೀರಾವರಿ ಪಂಪ್‌ಸೆಟ್‌ಗಳನ್ನು ಅಳವಡಿಸಿ, ಚಾಲನೆಗೊಳಿಸಲಾಗಿದೆ.
<u>ಸೂರ್ಯ ರೈತ ಯೋಜನೆ:</u>
ನೆಟ್ ಮೀಟರಿಂಗ್ ವ್ಯವಸ್ಥೆಯಡಿ, ಗ್ರಿಡ್ ಸಂಪರ್ಕಿತ ಸೌರ ವಿದ್ಯುತ್ ಚಾಲಿತ ಪಂಪ್‌ಸೆಟ್ – "ಸೂರ್ಯ ರೈತ ಯೋಜನೆ" ಗೆ ದಿನಾಂಕ:20.09.2014ರಂದು ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಬೆಸ್ಕಾಂ ವ್ಯಾಪ್ತಿಯ ಹಾರೋಬೆಲೆ ಗ್ರಾಮದಲ್ಲಿ ಪ್ರಾಯೋಗಿಕವಾಗಿ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ಸದರಿ ಯೋಜನೆಯಡಿ ರೈತರು ಗ್ರಿಡ್ ಸಂಪರ್ಕಿತ ಸೌರ ಚಾಲಿತ ಪಂಪ್‌ಸೆಟ್‌ನಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ಸ್ವಂತ ಬಳಕೆಗೆ ಉಪಯೋಗಿಸಿಕೊಂಡು ಉಳಿದ ಹೆಚ್ಚುವರಿ ವಿದ್ಯುತ್ತನ್ನು ವಿದ್ಯುತ್ ಸರಬರಾಜು ಕಂಪನಿಗಳ ಗ್ರಿಡ್‌ಗೆ ನಿವ್ವಳ ಮಾಪನ ವ್ಯವಸ್ಥೆಯಡಿ ಸರಬರಾಜು ಮಾಡಬಹುದಾಗಿರುತ್ತದೆ.</td>
</tr>
</table>

ಉ	ಕಿಲೋವ್ಯಾಟ್ ಒಂದಕ್ಕೆ ಸೋಲಾರ್ ಪ್ಯಾನಲ್‌ಗಳಿಗೆ ತಗಲುವ ವೆಚ್ಚ ಎಷ್ಟು; ಉತ್ಪಾದನೆಯಾಗುವ ವಿದ್ಯುತ್ ಎಷ್ಟು? (ವಿವರ ನೀಡುವುದು)	ಪ್ರಸ್ತುತ, ಕೆ.ಇ.ಆರ್.ಸಿ ರವರ ಆದೇಶದನ್ವಯ 1-10 ಕಿ. ವ್ಯಾ. ಸಾಮರ್ಥ್ಯದ ಗ್ರಿಡ್ ಸಂಪರ್ಕಿತ ಸೌರ ಮೇಲ್ಛಾವಣಿ ಘಟಕಕ್ಕೆ (ಗೃಹ ಬಳಕೆ ಗ್ರಾಹಕರಿಗೆ) ಕಿಲೋ ವ್ಯಾಟ್ ಒಂದಕ್ಕೆ ರೂ. 45,000/- ಹಾಗೂ 1-2000 ಕಿ. ವ್ಯಾ. ಸಾಮರ್ಥ್ಯದ ಸೌರ ವಿದ್ಯುತ್ ಘಟಕಕ್ಕೆ ರೂ. 32,800/- ಬಂಡವಾಳ ವೆಚ್ಚವಾಗುವುದು. ಒಂದು ಕಿಲೋವ್ಯಾಟ್ ಸಾಮರ್ಥ್ಯದ ಸೋಲಾರ್ ಪ್ಯಾನಲ್‌ಗಳಿಂದ ಒಂದು ದಿನಕ್ಕೆ 4 ರಿಂದ 5 ಯೂನಿಟ್ ವಿದ್ಯುತ್ ಉತ್ಪಾದನೆಯಾಗಬಹುದೆಂದು ಅಂದಾಜಿಸಲಾಗಿದೆ.

ಸಂಖ್ಯೆ: ಎನರ್ಜಿ 56 ಇಬಿಎಸ್ 2020

(ಬಿ.ಎಸ್. ಯಡಿಯೂರಪ್ಪ)

ಮುಖ್ಯಮಂತ್ರಿಗಳು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 714 ಕ್ಕೆ

ಅನುಬಂಧ-1

ರಾಜ್ಯದಲ್ಲಿನ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಒಟ್ಟು 4027 ಸಂಖ್ಯೆಯ ಗ್ರಾಹಕರುಗಳು ಸೋಲಾರ್ ಮೇಲ್ಛಾವಣಿ ಘಟಕಗಳನ್ನು ಅಳವಡಿಸಿಕೊಂಡಿದ್ದು, ಜಿಲ್ಲಾವಾರು ವಿವರಗಳು ಕೆಳಕಂಡಂತಿವೆ.

ಕಂಪನಿ	ಕ್ರ.ಸಂ	ಜಿಲ್ಲೆ	ಗ್ರಾಹಕರು ಅಳವಡಿಸಿಕೊಂಡಿರುವ ಸೋಲಾರ್ ಮೇಲ್ಛಾವಣಿ ಘಟಕಗಳ ಸಂಖ್ಯೆ
ಬೆ.ವಿ.ಕಂ	1	ಬೆಂಗಳೂರು ನಗರ	1464
	2	ಬೆಂ.ಗ್ರಾಮಾಂತರ	120
	3	ದಾವಣಗೆರೆ	125
	4	ಚಿಕ್ಕಬಳ್ಳಾಪುರ	25
	5	ತುಮಕೂರು	23
	6	ಕೋಲಾರ	57
	7	ರಾಮನಗರ	23
	8	ಚಿತ್ರದುರ್ಗ	27
ಮ.ವಿ.ಕಂ	9	ದಕ್ಷಿಣ ಕನ್ನಡ	482
	10	ಉಡುಪಿ	287
	11	ಶಿವಮೊಗ್ಗ	143
	12	ಚಿಕ್ಕಮಗಳೂರು	17
ಚಾವಿಸನಿನಿ	13	ಮೈಸೂರು	324
	14	ಮಂಡ್ಯ	33
	15	ಹಾಸನ	17
	16	ಕೊಡಗು	5
	17	ಚಾಮರಾಜ ನಗರ	4
ಹು.ವಿ.ಕಂ	18	ಧಾರವಾಡ	144
	19	ಗದಗ	79
	20	ಹಾವೇರಿ	54
	21	ಉತ್ತರ ಕನ್ನಡ	118
	22	ಬೆಳಗಾವಿ	211
	23	ವಿಜಯಪುರ	20
	24	ಬಾಗಲಕೋಟೆ	78
ಗು.ವಿ.ಕಂ	25	ಬೀದರ್	6
	26	ಕಲಬುರ್ಗಿ	35
	27	ಯಾದಗಿರಿ	2
	28	ಬಳ್ಳಾರಿ	61
	29	ರಾಯಚೂರು	17
	30	ಕೊಪ್ಪಳ	26
		ಒಟ್ಟು	**4027**

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 714 ಕ್ಕೆ

ಅನುಬಂಧ-2

ಕವಿನಿನಿಯ ವಿದ್ಯುತ್ ಕೇಂದ್ರಗಳ 2019-20ನೇ ಸಾಲಿನ ಸ್ಥಾಪಿತ ಸಾಮರ್ಥ್ಯ ಹಾಗೂ ಸ್ಥಾವರವಾರು ವಿದ್ಯುತ್ ಉತ್ಪಾದನೆ ಮತ್ತು ಇದಕ್ಕೆ ತಗಲುವ ವೆಚ್ಚದ ವಿವರ (2018-19ನೇ ಸಾಲಿನ) ಕೆಳಕಡಂತಿಂವೆ:

ಕ್ರಮ ಸಂಖ್ಯೆ	ವಿದ್ಯುದಾಗಾರಗಳು	ಉತ್ಪಾದನಾ ಸಾಮರ್ಥ್ಯ ಮೆ.ವ್ಯಾಗಳಲ್ಲಿ	ನಿಜ ಉತ್ಪಾದನೆ 2019–20 *ದಲಯೂ.ಗಳಲ್ಲಿ* (01.04.2019ರಿಂದ 02.03.2020ರವರಗೆ)	ತಗಲುವ ವೆಚ್ಚ (ಪೈಸೆ/ಕಿವ್ಯಾಎಚ್) (2018–19ನೇ ಸಾಲಿನ)
1	ಶರಾವತಿ	1035	4620.90	40
2	ಲಿಂಗನಮಕ್ಕಿ	55	267.46	
3	ಬದ್ರಾ	39.20	66.53	418
4	ನಾಗಝರಿ	900	3183.55	60
5	ಸೂಪ	100	540.72	
6	ವರಾಹಿ	460	1099.61	103
7	ಮಾಣಿ	9	27.54	
8	ಘಟಪ್ರಭಾ	32	40.69	200
9	ಕದ್ರಾ	150	428.83	200
10	ಕೊಡಸಳ್ಳಿ	120	417.86	132
11	ಗೇರುಸೊಪ್ಪ	240	521.45	121
12	ಆಲಮಟ್ಟಿ	290	622.28	161
13	ಶಿವನ ಸಮುದ್ರಂ	42	197.08	137
14	ಶಿಂಷಾಪುರ	17.20	56.04	137
15	ಎಮ್‌ಜಿಹೆಚ್‌ಇ	139.20	265.55	137
16	ಮಲ್ಲಾಪುರ	9	21.16	
17	ಸಿರ್‌ವಾರ	1	0	
18	ಕಲ್ಮಲ	0.40	0	
19	ಗಾಣೇಕಲ್	0.35	0	
20	ಮಲಪ್ರಭಾ	2.40	4.90	200
21	ಮುನಿರಾಬಾದ್	38	93.135	137
	ಒಟ್ಟು (ಜಲ ವಿದ್ಯುತ್)	**3679.75**	**12475.33**	
22	ಆರ್‌ಟಿಪಿಎಸ್ ಘಟಕ–1–8	1720	7762.51	ಘಟಕ (1-7) =482 ಘಟಕ–8 =539
23	ಬಿಟಿಪಿಎಸ್ ಘಟಕ–1–3	1700	3832.23	ಘಟಕ–1 =577 ಘಟಕ–2 =572 ಘಟಕ–3 =587
24	ವೈಟಿಪಿಎಸ್	1600	115.35	555
	ಒಟ್ಟು (ಶಾಖೋತ್ಪನ್ನ)	**5020**	**11710.09**	
25	ಕಪ್ಪದಗುಡ್ಡ (ಪವನ)	4.555	7.25	487
26	ಸೌರಶಕ್ತಿ –ಕೋಲಾರ, ಬೆಳಗಾಂ, ಯಪಾಲ್‌ದಿನ್ನಿ, ಬಳಕವಾಡಿ,ಶಿವನಸಮುದ್ರಂ, ಚಂದಾಪುರ	34	38.99	776
	ಒಟ್ಟು	**8738.305**	**24231.67**	

ಪ್ರಸ್ತುತ ಕೆ.ಇ.ಆರ್.ಸಿ. ರವರ ಆದೇಶಗಳಂತೆ ಅಸಂಪ್ರದಾಯಕ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನೆಗೆ ತಗಲುವ ಬಂಡವಾಳ ವೆಚ್ಚ ಮತ್ತು ಪ್ರತಿ ಯೂನಿಟ್ ಜಕಾತಿ ದರ ಈ ಕೆಳಗಿನಂತಿದೆ:

ಮೂಲ	ಬಂಡವಾಳ ವೆಚ್ಚ ರೂ. ಗಳಲ್ಲಿ	ಪ್ರತಿ ಯೂನಿಟ್ ಜಕಾತಿ ದರ ರೂ. ಗಳಲ್ಲಿ
ಸೌರ	3.40 ಕೋಟಿ/ಮೆ.ವ್ಯಾ.	3.08
ಸೌರ ಮೇಲ್ಛಾವಣಿ 1ಕಿ.ವ್ಯಾ-10ಕಿ.ವ್ಯಾ (ಗೃಹ ಬಳಕೆ ಗ್ರಾಹಕರಿಗೆ)	45,000/ಕಿ.ವ್ಯಾ	ಸಬ್ಸಿಡಿ ರಹಿತ:3.99 ಸಬ್ಸಿಡಿ ಸಹಿತ:2.97
ಸೌರ ಮೇಲ್ಛಾವಣಿ 1ಕಿ.ವ್ಯಾ-2ಮೆ.ವ್ಯಾ	32,800/ಕಿ.ವ್ಯಾ	ಸಬ್ಸಿಡಿ ರಹಿತ:3.07 ಸಬ್ಸಿಡಿ ಸಹಿತ:2.32
ಪವನ	6.00 ಕೋಟಿ/ಮೆ.ವ್ಯಾ.	3.26
ಕಿರು ಜಲ	6.33 ಕೋಟಿ/ಮೆ.ವ್ಯಾ.	3.95
ಜೈವಿಕ ಇಂಧನ	5.86 ಕೋಟಿ/ಮೆ.ವ್ಯಾ.	5.74 (Water Cooled) 5.54 (Air Cooled)
ಸಹ ವಿದ್ಯುತ್	4.70 ಕೋಟಿ/ಮೆ.ವ್ಯಾ.	3.69